ವಿಷಯ: ಶ್ರೀ ರಾಯಗೇರಿ ಬಿ.ಎಸ್. ಹಾಗೂ ಶ್ರೀ ರಾಮಕೃಷ್ಣ, ಹಿಂದಿನ ಎ.ಕಾ. ಇಂಜಿನಿಯರ್ ವಿರುದ್ಧ ಕ್ರಮ ವಹಿಸುವಲ್ಲಿ ವಿಳಂಬ ಮಾಡಿರುವ ಬಗ್ಗೆ.

**ಸಂಖ್ಯೆ : ಗ್ರಾಅಪ :** 38 ENQ 2016

114] ಕಡತ ಸಂಖ್ಯೆ : ಗ್ರಾಅಪ 217 ಪಬವ 2016ರಲ್ಲಿನ ಕಂಡಿಕೆ 105–111 ರಲ್ಲಿನ ಮಾನ್ಯ ಸಚಿವರ ಟಿಪ್ಪಣಿ / ಆದೇಶಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿದೆ. ಮಾನ್ಯ ಸಚಿವರು ಸದರಿ ಕಂಡಿಕೆಗಳಲ್ಲಿ ನಮೂದಿಸಿರುವ ಈ ಕೆಳಕಂಡ ಅಂಶಗಳ ಬಗ್ಗೆ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಅಧೀನ ಕಾರ್ಯದರ್ಶಿ (ಸೇವೆಗಳು–ಎ) ಇವರುಗಳು ಸಲ್ಲಿಸಿದ ವಿವರಣೆಯನ್ನು ಆಧರಿಸಿ ಈ ಕೆಳಕಂಡಂತೆ ಮಂಡಿಸಿದೆ.:–

1. ಶ್ರೀ ಬಿ.ಎಸ್. ರಾಯಗೇರಿ ಇವರು ಮಾನ್ಯ ಕೆ.ಎ.ಟಿ. ಯಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ : 255/2016 ಗೆ ಸಂಬಂಧಿಸಿದಂತೆ ಆಕ್ಷೇಪಣಾ ಹೇಳಿಕೆ ಸಲ್ಲಿಸದೆ ಲೋಪವೆಸಗಿರುವ ಬಗ್ಗೆ;

   ಮಾನ್ಯ ನ್ಯಾಯ ಮಂಡಳಿಯು ಶ್ರೀ ಬಿ.ಎಸ್.ರಾಯಗೇರಿ ಇವರು ಸಲ್ಲಿಸಿದ ಅರ್ಜಿ ಸಂಖ್ಯೆ : 255/2016ಗೆ ಸಂಬಂಧಿಸಿದಂತೆ ಸರ್ಕಾರಿ ವಕೀಲರನ್ನು ಅಧಿಕೃತಗೊಳಿಸಿದ್ದರೂ, ದಿನಾಂಕ : 18.02.2016 ರಂದು ಪ್ರಾಥಮಿಕ ವಿಚಾರಣೆಯ ಸಂದರ್ಭದಲ್ಲಿ ಸರ್ಕಾರಿ ವಕೀಲರು ಹಾಜರಿದ್ದರೂ ಮಾನ್ಯ ನ್ಯಾಯಾಲಯವು "This application is coming on for preliminary hearing, this day, the Hon'ble Chairman made the following" ಎಂದು ನಮೂದಿಸಿ ವಿಲೇಗೊಳಿಸಿರುತ್ತದೆ. ಸಾಮಾನ್ಯವಾಗಿ ನ್ಯಾಯ ಮಂಡಳಿಯು ಅರ್ಜಿಗಳನ್ನು ಪ್ರಾಥಮಿಕ ವಿಚಾರಣೆಗೆ ಕೈಗೆತ್ತಿಗೊಂಡ ಸಂದರ್ಭದಲ್ಲಿ ಪ್ರತಿವಾದಿಗಳಿಗೆ ನಿಗಧಿತ ಕಾಲಾವಧಿಯ ಒಳಗೆ ದಾಖಲೆ ಮತ್ತು ಆಕ್ಷೇಪಣಾ ಹೇಳಿಕೆ ಸಲ್ಲಿಸಲು ಅವಕಾಶವನ್ನು ನೀಡುವ ಪದ್ಧತಿ ಇರುತ್ತದೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ ಮಾನ್ಯ ನ್ಯಾಯ ಮಂಡಳಿಯು ಪ್ರಾಥಮಿಕ ವಿಚಾರಣೆಯ ಸಂದರ್ಭದಲ್ಲಿಯೇ ಅರ್ಜಿಯನ್ನು ವಿಲೇಗೊಳಿಸಿರುತ್ತದೆ. ಹಾಗಾಗಿ ಸದರಿ ಅರ್ಜಿಗೆ ಸಂಬಂಧಿಸಿದಂತೆ ಇಲಾಖಾ ವತಿಯಿಂದ ಆಕ್ಷೇಪಣಾ ಹೇಳಿಕೆ ಸಲ್ಲಿಸಲು ಅವಕಾಶವಾಗಿರುವುದಿಲ್ಲ.

2. ಶ್ರೀ ಬಿ.ಎಸ್.ರಾಯಗೇರಿ ಹಾಗೂ ಶ್ರೀ ರಾಮಕೃಷ್ಣ ಇವರುಗಳ ವಿರುದ್ಧ ಶಿಸ್ತು ಕ್ರಮ ವಹಿಸುವ ದಿಸೆಯಲ್ಲಿ ದೋಷಾರೋಪಣ ಪಟ್ಟಿ ತಯಾರಿಸುವಲ್ಲಿ 6 ತಿಂಗಳ ಅವಧಿ ವಿಳಂಬಿಸಿರುವ ಬಗ್ಗೆ ;

   ಕರ್ನಾಟಕ ನಾಗರೀಕ ಸೇವೆ (ವ.ನಿ.ಮೇ) ನಿಯಮಗಳಡಿಯಲ್ಲಿ ಯಾವುದೇ ಒಂದು ವಿಷಯಕ್ಕೆ ಸಂಬಂಧಿಸಿದಂತೆ ದೋಷಾರೋಪಣೆ ಪಟ್ಟಿಯನ್ನು ಜಾರಿ ಮಾಡುವ ಮೂಲಕ ಇಲಾಖಾ ವಿಚಾರಣೆಯನ್ನು ಕೈಗೊಂಡಲ್ಲಿ ಪುನಃ ಅದೇ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ಕೈಗೊಳ್ಳಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಶ್ರೀ ಪುನಟಿ ಶ್ರೀಧರ್ ರವರ ವರದಿಯನ್ನಾಧರಿಸಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪರಿಶೀಲಿಸಿದ್ದು, ಇದೇ ವಿಷಯದಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಹಿರಿಯ ಅಧಿಕಾರಿಗಳ ತಂಡವು ಇನ್ನೂ ತನಿಖಾ

ವರದಿಯನ್ನು ಸಲ್ಲಿಸದಿರುವುದರಿಂದ ಸದರಿ ವರದಿಯನ್ನು ಸಹ ಆಧರಿಸಿ ದೋಷಾರೋಪಣೆ ಪಟ್ಟಿಯನ್ನು ಆಪಾದಿತರುಗಳ ಮೇಲೆ ಜಾರಿ ಮಾಡಲು ಕಾನೂನಿನ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದ್ದುದರಿಂದ ಶ್ರೀ ಪುನಟಿ ಶ್ರೀಧರ್ ರವರ ಸಮಿತಿಯ ವರದಿ ಹಾಗೂ ರಾಜ್ಯ ಲೆಕ್ಕಪತ್ರ ಇಲಾಖೆಯ ಹಿರಿಯ ಅಧಿಕಾರಿಗಳ ತಂಡವು ಸಲ್ಲಿಸುವ ವರದಿ ಎರಡನ್ನೂ ಆಧರಿಸಿ ದೋಷಾರೋಪಣೆ ಪಟ್ಟಿ ತಯಾರಿಸಲು ಉದ್ದೇಶಿಸಲಾಗಿತ್ತು. ಹಾಗಾಗಿ ದೋಷಾರೋಪಣೆ ಪಟ್ಟಿ ತಯಾರಿಸುವಲ್ಲಿ ವಿಳಂಬವಾಗಿರುತ್ತದೆ.

3. ಶ್ರೀ ಬಿ.ಎಸ್.ರಾಯಗೇರಿ ಇವರ ಅಮಾನತ್ತಿನ ಆದೇಶದಲ್ಲಿನ ಅಂಶಗಳನ್ನು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸದೆ ಇರುವ ಬಗ್ಗೆ ;

ಶ್ರೀ ಬಿ.ಎಸ್.ರಾಯಗೇರಿ ಇವರ ಅಮಾನತ್ತಿನಲ್ಲಿ ನಮೂದಿಸಿರುವ ಅಂಶಗಳು ಮೇಲ್ನೋಟಕ್ಕೆ ಕಂಡು ಬಂದವುಗಳಾಗಿರುತ್ತವೆ. ಆಂತರಿಕ ಆರ್ಥಿಕ ಸಲಹೆಗಾರರು 105 ಬ್ಯಾಂಕ್ ಖಾತೆಗಳ ವಿವರಗಳನ್ನು ಸಲ್ಲಿಸಿದ ಸಂದರ್ಭದಲ್ಲಾಗಲಿ ಅಥವಾ ಶ್ರೀ ಪುನಟಿ ಶ್ರೀಧರ್ ರವರು ಸಲ್ಲಿಸಿದ ವರದಿಯಲ್ಲಾಗಲೀ ಶ್ರೀ ರಾಯಗೇರಿ ಇವರೇ ಕಾರಣರೆಂದು ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ಆದಾಗ್ಯೂ ಇಲಾಖೆಯಲ್ಲಿ ಲಭ್ಯವಿರುವ ಕಡತಗಳ ಪ್ರತಿಗಳು ಹಾಗೂ ಇತರೆ ಮಾಹಿತಿಯನ್ನು ಆಧರಿಸಿ ದೋಷಾರೋಪಣಾ ಪಟ್ಟಿಯನ್ನು ತಯಾರಿಸಲಾಗಿದೆ. ಬಾಕಿಯಿರುವ ರಾಜ್ಯಲೆಕ್ಕಪತ್ರ ಇಲಾಖೆಯ ತನಿಖೆಯಲ್ಲಿ ಇನ್ನೂ ಹೆಚ್ಚಿನ ಅಂಶಗಳು ಹೊರಬರಬಹುದೆಂದು ನಿರೀಕ್ಷಿಸಲಾಗಿತ್ತು.

ಕ.ನಾ.ಸೇ.(ವ.ನಿ.ಮೇ) ನಿಯಮಗಳ ನಿಯಮ 11 (3) ರ ಅನುಸಾರ ದೋಷಾರೋಪಣಾ ಪಟ್ಟಿಯಲ್ಲಿನ ಪ್ರತಿ ಆರೋಪಕ್ಕೂ ಸಂಬಂಧಿಸಿದಂತೆ ಆರೋಪ ಸಾಬೀತುಪಡಿಸಲು ದಾಖಲೆಗಳು ಮತ್ತು ಸಾಕ್ಷಿಗಳನ್ನು ಪೂರಕವಾಗಿ ನಮೂದಿಸಬೇಕಾಗುತ್ತದೆ. ಹಾಗಾಗಿ ಅಮಾನತ್ತಿನ ಆದೇಶದಲ್ಲಿನ ಎಲ್ಲಾ ಅಂಶಗಳನ್ನು ದೋಷಾರೋಪಣಾ ಪಟ್ಟಿಯಲ್ಲಿ ಯಥಾವತ್ತಾಗಿ ನಮೂದಿಸಲಾಗಿಲ್ಲ.

4. ಶ್ರೀ ಪುನಟಿ ಶ್ರೀಧರ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ನೀಡಿದ ಅಂತಿಮ ವರದಿಯಲ್ಲಿ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಟ್ಟು 1128 ಬ್ಯಾಂಕ್ ಖಾತೆಗಳು ಪತ್ತೆಯಾಗಿದ್ದು, ಅವುಗಳಲ್ಲಿ ಹಣ ಲಭ್ಯವಿರುವ ಬಗ್ಗೆ.

ಶ್ರೀ ಪುನಟಿ ಶ್ರೀಧರ್ ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ನೀಡಿದ ಅಂತಿಮ ವರದಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಒಟ್ಟಾರೆ 10 ವಿಭಾಗಗಳು ಮತ್ತು 30 ಜಿಲ್ಲಾ ಪಂಚಾಯತಿಗಳಿಂದ ಕ್ರೋಢೀಕರಿಸಿದ ಮಾಹಿತಿಯ ಅನುಸಾರ 1128 ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು ರೂ.1335.89 ಕೋಟಿ ರೂ.ಗಳಿರುವುದು ಕಂಡುಬಂದಿರುವ ಬಗ್ಗೆ ನಮೂದಿಸಿರುತ್ತದೆ (ಪುಟ:6).

ವಿಷಯ [illegible]

ಸಂಖ್ಯೆ : ಗ್ರಾಅಪ : 38 ENQ 201

5. ಕೆಲವೊಂದು ಮಾಹಿತಿಯನ್ನು ಮರೆಮಾಚಿ ಆರೋಪಿತರಿಗೆ ಸಹಾಯವಾಗುವ ರೀತಿಯಲ್ಲಿ ದೋಷಾರೋಪಣ ಪಟ್ಟಿ ತಯಾರಿಸಲಾಗಿದೆ ಎಂಬ ಬಗ್ಗೆ;

ಇಲಾಖೆಯಲ್ಲಿ ಲಭ್ಯವಾಗಿರುವ ಮಾಹಿತಿ, ಶ್ರೀ ಮುನಟಿ ಶ್ರೀಧರ್ ರವರ ಸಮಿತಿಯ ವರದಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು ಒದಗಿಸಿರುವ ದಾಖಲೆಗಳನ್ನು ಆಧರಿಸಿ ದೋಷಾರೋಪಣಾ ಪಟ್ಟಿಗಳನ್ನು ತಯಾರಿಸಲಾಗಿದೆ. ಈಗಾಗಲೇ ಮೇಲಿನ ಕಂಡಿಕೆಯಲ್ಲಿ ತಿಳಿಸಿದಂತೆ ಆರೋಪಗಳು ನಿರ್ದಿಷ್ಟವಾಗಿಯೂ ಮತ್ತು ದಾಖಲೆಗಳೊಂದಿಗೆ ಸಾಬೀತುಪಡಿಸಬೇಕಾಗಿರುವುದರಿಂದ ನಿರ್ದಿಷ್ಟ ಆರೋಪಗಳನ್ನು ತಯಾರಿಸಲಾಗಿದ್ದು, ಆಪಾದಿತರಿಗೆ ಸಹಾಯವಾಗುವ ರೀತಿಯಲ್ಲಿ ಅಥವಾ ಯಾವುದೇ ಅಂಶಗಳನ್ನು ಮರೆಮಾಚುವ ಪ್ರಯತ್ನ ಮಾಡಿರುವುದಿಲ್ಲವೆಂದು ನಿವೇದಿಸಿದೆ.

115] ಮೇಲಿನ ಅಂಶಗಳ ಕುರಿತು ಪುಟ 4–1 ರಲ್ಲಿರುವ ವಿವರಣೆಗಳು ಸಮರ್ಪಕವಾಗಿದ್ದು, ಇಲಾಖೆಯ ಹಂತದಲ್ಲಿ ಪರಿಗಣಿಸಬಹುದಾದ ಯಾವುದೇ ಲೋಪಗಳು, ಆಪಾದಿತರಿಗೆ ಅನುಕೂಲವಾಗುವ ರೀತಿಯಲ್ಲಿ ದೋಷಾರೋಪಣೆ ತಯಾರಿಸದಿರುವುದು, ದೋಷಾರೋಪಣಾ ಪಟ್ಟಿ ತಯಾರಿಕೆಯಲ್ಲಿ ಯಾವುದೇ ಉದ್ದೇಶ ಪೂರ್ವಕ ವಿಳಂಬವಾಗದಿರುವುದು, ನ್ಯಾಯಾಲಯಕ್ಕೆ ಆಕ್ಷೇಪಣಾ ಹೇಳಿಕೆ ಸಲ್ಲಿಸದೇ ವಿಳಂಬಿಸಿರುವುದು ಹಾಗೂ ಈ ಎಲ್ಲಾ ಕ್ರಮಗಳ ಹಿಂದೆ ವೈಯಕ್ತಿಕ ಹಿತಾಸಕ್ತಿ ಇರುವುದಿಲ್ಲವೆಂದು ನಿವೇದಿಸುತ್ತಾ ಕಡತವನ್ನು ಆದೇಶ ಕೋರಿ ಸಲ್ಲಿಸಿದೆ.

28/4/16.

ಅ.ಕಾ.(ಸೇವೆಗಳು–ವಿ)

ಅಪರ ಮುಖ್ಯ ಕಾರ್ಯದರ್ಶಿರವರು]

ACS, RDPR
No. 1449 Dt. 2/5/16

ವಿಷಯ



116) ಕಂಡಿಕೆ-111 ರನ್ವಯ ಕಡತವನ್ನು ಮರುಮಂಡಿಸಿದೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿನ ಬರ ಪರಿಸ್ಥಿತಿ ಕುರಿತು ಕೈಗೊಂಡಿದ್ದ ಬೆಳಗಾವಿ ವಿಭಾಗದ ಪರಿಶೀಲನಾ ಸಭೆಗಳಲ್ಲಿ ಪಾಲ್ಗೊಳ್ಳಲು ದಿನಾಂಕ: 24-04-2016 ರಿಂದ 27-04-2016 ರವರೆಗೆ ಪ್ರವಾಸದಲ್ಲಿದ್ದೆನು. ಆಂತರಿಕ ಆರ್ಥಿಕ ಸಲಹೆಗಾರರು ದಿನಾಂಕ: 21-04-2016 ರಿಂದ ತರಬೇತಿಯಲ್ಲಿದ್ದು, ದಿನಾಂಕ:25-4-2016 ರಂದು ನೀಡಿರುವ ಮಾಹಿತಿಯನ್ನು ಪಡೆಯಲಾಗಿರುತ್ತದೆ.

117) ಕಂಡಿಕೆ 114-115ನ್ನು ದಯಮಾಡಿ ಅವಗಾಹಿಸುವುದು. ಪ್ರಕರಣದ ಪ್ರಾಮುಖ್ಯತೆಯನ್ನರಿತು, ಶ್ರೀ ರಾಯಗೇರಿ ಇವರ ವಿರುದ್ಧ ಕಾನೂನಾತ್ಮಕವಾಗಿ ಸಮರ್ಥನೀಯವಾದ ಆರೋಪವನ್ನು ರೂಪಿಸಲು ಅಧಿಕಾರಿಗಳು ಪ್ರಯತ್ನ ಪಡುತ್ತಿದ್ದಾರೆ. ದಾಖಲೆಗಳ ಆಧಾರದ ಮೇಲೆ ಆರೋಪಿತ ಅಧಿಕಾರಿಯು ಪ್ರಕರಣದಲ್ಲಿ ಭಾಗಿಯಾಗಿರುವ ಕುರಿತಾದ ಆರೋಪಗಳನ್ನು ಸಾಬೀತು ಪಡಿಸಬೇಕಾಗಿರುವುದರಿಂದ, ದಾಖಲೆಗಳ ಮೊರೆಹೋಗಬೇಕಾಗಿರುತ್ತದೆ. ಮೇಲ್ನೋಟಕ್ಕೆ ಆರೋಪಗಳು ಕಂಡು ಬಂದರೂ ಕೂಡಾ, ಈ ಸಂದರ್ಭದಲ್ಲಿ ಆರೋಪಿತ ಅಧಿಕಾರಿಯು ನೀಡುವ ಹೇಳಿಕೆಗಳ ಆಧಾರದ ಮೇಲೆ ವ್ಯಾಖ್ಯಾನಿಸುವುದು ಸಮಂಜಸವಾಗಿರುವುದಿಲ್ಲ. ಸಿ.ಸಿ.ಎ ನಿಯಾಮಾವಳಿಗಳನ್ವಯ ಕಾರಣ ಕೇಳುವ ನೋಟೀಸಿಗೂ ದೋಷರೋಪಣೆಗಳಿಗೂ ವ್ಯತ್ಯಾಸವಿರಬಹುದು ಏಕೆಂದರೆ, ಅವರ ಹೇಳಿಕೆ ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಪ್ರಕರಣಕ್ಕೆ ಕುರಿತಾದ ಇನ್ನೂ ಹೆಚ್ಚಿನ ಮಾಹಿತಿ ಲಭ್ಯವಾಗಬಹುದು. ಸಿ.ಸಿ.ಎ ನಿಯಮಾವಳಿಗಳ ನಿಯಮ 11(3) ರನ್ವಯ, ಪ್ರತಿಯೊಂದು ವಿಚಾರಣೆಯಲ್ಲಿ ಆರೋಪಿತ ಅಧಿಕಾರಿಗೆ ಆರೋಪಕ್ಕೆ ಪೂರಕವಾದ ದಾಖಲೆಗಳನ್ನು ನೀಡಬೇಕಾಗುತ್ತದೆ. ದಾಖಲೆಗಳನ್ವಯ, 2 ಬ್ಯಾಂಕ್ ಖಾತೆಗಳಿಗೆ ಕುರಿತಾದ ಮಾಹಿತಿಯನ್ನು ನೀಡುವಂತೆ ಶ್ರೀ ಪುನಿಟಿ ಶ್ರೀಧರ್ ಸಮಿತಿಯು ಕೋರಿದ ಸಂದರ್ಭದಲ್ಲಿ ಆರೋಪಿತ ಅಧಿಕಾರಿಯು ಇದಕ್ಕೆ ಕಾಲಾವಕಾಶ ಕೋರಿ, ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವಂತೆ ಕೋರಿರುತ್ತಾರೆ. ಇವರ ಕೋರಿಕೆಯ ಬಗ್ಗೆ ಸಮಿತಿ ವರದಿಯಲ್ಲಿ ಎಲ್ಲೂ ಸ್ಪಷ್ಟವಾದ ಮಾಹಿತಿ ಲಭ್ಯವಿರುವುದಿಲ್ಲ.

118) ಆಂತರಿಕ ಆರ್ಥಿಕ ಸಲಹೆಗಾರರು ತಮ್ಮ ದಿನಾಂಕ: 25-04-2016ರ ಟಿಪ್ಪಣಿಯಲ್ಲಿ ತಿಳಿಸಿರುವಂತೆ, ಶ್ರೀ ಪುನಿಟಿ ಶ್ರೀಧರ್ ವರದಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಆಯುಕ್ತಾಲಯದಲ್ಲಿನ 18 ಬ್ಯಾಂಕ್ ಖಾತೆಗಳ ನಿರ್ವಹಣೆಯ ಕುರಿತಾಗಿ ಆರೋಪಿತ ಅಧಿಕಾರಿಯ ವಿರುದ್ಧ ಯಾವುದೇ ನೇರ ಆರೋಪಗಳನ್ನು ಮಾಡಿರುವುದಿಲ್ಲ. ಮಾನ್ಯ ಸಚಿವರಿಗೆ ತಿಳಿದಿರುವಂತೆ, ಈ ಪ್ರಕರಣವನ್ನು ಹೆಚ್ಚು ಬಲಪಡಿಸುವ ದೃಷ್ಟಿಯಿಂದ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆಯುವ ಸಂದರ್ಭದಲ್ಲಿ ಬ್ಯಾಂಕುಗಳಿಗೆ ನೀಡಲಾದ ಅರ್ಜಿಗಳನ್ನು ಪಡೆಯಲು ಕ್ರಮ ವಹಿಸಲಾಗುತ್ತಿದೆಯೇ ಹೊರತು, ಈ ಪ್ರಕರಣ ದುರ್ಬಲಗೊಂಡು ಆರೋಪಿತ ಅಧಿಕಾರಿಯು ಪ್ರಕರಣದಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡುವ ಯಾವುದೇ ದುರದ್ದೇಶ ಇರುವುದಿಲ್ಲ.

119) ಆದ್ದರಿಂದ, ಶ್ರೀ ರಾಯಗೇರಿ ಇವರ ವಿರುದ್ಧ ಹೊರಡಿಸಲು ಉದ್ದೇಶಿಸಲಾಗಿರುವ ದೋಷಾರೋಪಗಳ ಕುರಿತು ಮೇಲ್ಕಂಡ ಅಂಶಗಳನ್ನು ಪರಿಗಣಿಸಲಾಗಿದೆ ಎಂಬ ಮಾಹಿತಿಯನ್ನು ಅವಗಾಹನೆಗೆ ಸಲ್ಲಿಸಿದೆ.

ಸುಭಾಷ್ ಚಂದ್ರ 30.4.16

(ಸುಭಾಷ್ ಚಂದ್ರ)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಸಚಿವರು

(120)

ಎಚ್.ಕೆ. ಪಾಟೀಲ

ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಸಚಿವರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕಛೇರಿ

ಸಂಖ್ಯೆ: 2205

ಸ್ವೀಕೃತಿ ದಿ: 02.05.2016

ರವಾನೆ ದಿ: 14.7.2016

122) ಅಧಿಕಾರಿಗಳು ನೀಡಿರುವ ಸಮಜಾಯಿಷಿಯನ್ನು ಗಮನಿಸಿದೆ. ಇನ್ನು ಮುಂದೆ ಇಂತಹ ವಿಳಂಬದ ಕ್ರಮಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಪ್ರಸ್ತುತ ಪ್ರಕರಣದಲ್ಲಿ ಒಂದು ಬಾರಿಯ ಕ್ರಮವಾಗಿ ಎಚ್ಚರಿಕೆ ನೀಡಿದೆ.

(ಎಚ್ ಕೆ ಪಾಟೀಲ)
ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

123) ಸಹಕಾರ ಪ್ರಧಾನ ಕಾರ್ಯದರ್ಶಿಯವರು)